ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 31–08–2021

# ಪತ್ರಿಕಾ ಪ್ರಕಟಣೆ

**PRESS RELEASE**

## ಬೇಕರಿ ತರಬೇತಿ

ಬೆಂಗಳೂರು, ಆಗಸ್ಟ್ 31 (ಕರ್ನಾಟಕ ವಾರ್ತೆ):

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಬೇಕರಿ ತರಬೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸೆಪ್ಟೆಂಬರ್ 06 ರಿಂದ ಆರಂಭವಾಗುವ ತರಬೇತಿಯನ್ನು ಆಸಕ್ತಿಯುಳ್ಳ ಬೇಕರಿದಾರರಿಗೆ ಉದ್ದಿಮೆ ಮತ್ತು ಗೃಹಿಣಿಯರಿಗಾಗಿ ಆಯೋಜಿಸಲಾಗಿದೆ. ತರಬೇತಿಯಲ್ಲಿ ಬ್ರೆಡ್, ಬನ್, ಪಪ್ಸ್, ಕೇಕ್‌ಗಳು, ವಿಶೇಷ ಬಿಸ್ಕತ್ತುಗಳು, ರೋಲ್ಸ್‌ಗಳು ಮತ್ತಿತರ ಆಕರ್ಷಕ ಬೇಕರಿ ಪದಾರ್ಥಗಳನ್ನು ತಯಾರಿಸಲು ತರಬೇತಿ ನೀಡಲಾಗುವುದು.

ಅಭ್ಯರ್ಥಿಗಳು ಸ್ವತ: ಪದಾರ್ಥ ತಯಾರಿಸುವ ಮೂಲಕ ಕಲಿಯುವ ಸೌಲಭ್ಯವಿದೆ. ಯಾವುದೇ ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತಯಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ತರಬೇತಿ ಘಟಕದಲ್ಲೇ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು–560 024, ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080–23513370 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## BAKING COURSE

Bengaluru, August 31 (Karnataka Information):

The Bakery Training Unit, , Hebbal, Bangalore Is conducting ***4 weeks training course on Bakery Technology*** for the benefit of Housewives and Entrepreneurs from **06.09.2021**. Bakery products like special Biscuits, Bread Rolls, Puffs, Cakes and fancy items will be taught during the course. Participants will be allowed to learn by preparing the products by themselves. The interested persons can contact Coordinator in person or through telephone no. **23513370** during office hours.

## ಮೀಸಲಾತಿ ಪರಾಮರ್ಶಿಸಲು ಉನ್ನತ ಮಟ್ಟದ ಸಮಿತಿ ರಚನೆ

ಬೆಂಗಳೂರು, ಆಗಸ್ಟ್ 31 (ಕರ್ನಾಟಕ ವಾರ್ತೆ):

ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಸುಭಾಷ್ ಆಡಿ ಅವರ ಅಧ್ಯಕ್ಷತೆಯಲ್ಲಿ ಮೀಸಲಾತಿ ಪರಾಮರ್ಶಿಸುವ ಕುರಿತು ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, ಈ ಸಮಿತಿಗೆ ಸದಸ್ಯರುಗಳಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಎಂ.ಆರ್.ಕಾಂಬ್ಳೆ, ಭಾ.ಆ.ಸೇ, (ನಿ), ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಮೈಸೂರು ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಬಿ.ವಿ.ವಸಂತ್‌ಕುಮಾರ್ ಮತ್ತು ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳಾಗಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಕಛೇರಿಯ (ಮೂಲಭೂತ ಸೌಕರ್ಯ) ಜಂಟಿ ನಿರ್ದೇಶಕರಾದ ಡಾ. ಸಾಬೀರ್ ಅಹಮ್ಮದ್ ಮುಲ್ಲಾ ಅವರನ್ನು ಸರ್ಕಾರವು ನೇಮಿಸಿ ಆದೇಶ ಹೊರಡಿಸಿದೆ.

ಈ ಸಮಿತಿಯು ಆಗಸ್ಟ್ 27 ರಂದು ಕಾರ್ಯಾರಂಭಿಸಿ, ಸಭೆಯನ್ನು ನಡೆಸಿ ಸಭೆಯಲ್ಲಿ ಸದಸ್ಯರುಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಸಮಿತಿಗೆ ವಹಿಸಿದ Terms and Reference ಗೆ ಪೂರಕವಾಗಿ ಸಮಿತಿಯ ಅಧ್ಯಕ್ಷರು ಹಾಗೂ ನ್ಯಾಯಮೂರ್ತಿಗಳಾದ ಸುಭಾಷ್ ಆಡಿ ಅವರು ವಿಷಯವಾರು ಸಮಿತಿಗೆ ವಹಿಸಿಕೊಟ್ಟ ವಿಷಯಗಳ ಬಗ್ಗೆ ಚರ್ಚಿಸಿ, ಸಂಬಂಧಿತ ಅಧಿಕಾರಿಗಳು ಮೀಸಲಾತಿ ಪರಾಮರ್ಶೆ ಬಗ್ಗೆ ಮಾಹಿತಿ ಸಲ್ಲಿಸಲು ಸೂಚಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನೀರಿನ ಅದಾಲತ್

ಬೆಂಗಳೂರು, ಆಗಸ್ಟ್ 31 (ಕರ್ನಾಟಕ ವಾರ್ತೆ):

ಬೆಂಗಳೂರು ನೀರು ಸರಬರಾಜು ಮತ್ತು ಜಲಮಂಡಳಿಯು ಸೆಪ್ಟೆಂಬರ್ 02 ಗುರುವಾರದಂದು **(ಪಶ್ಚಿಮ)-1, (ನೈರುತ್ಯ)-1, (ಆಗ್ನೇಯ-1), (ದಕ್ಷಿಣ-1),( ಪೂರ್ವ-2)-1, ( ಪೂರ್ವ-1)-1 , (ಉತ್ತರ ವಿಲೇಜ್)-2, (ಕೇಂದ್ರ-1) (ವಾಯುವ್ಯ-1) ಮತ್ತು (ವಾಯುವ್ಯ-4)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು-ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್‌ಅನ್ನು ಬೆಳಿಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುವುದು.

ಅದಾಲತ್ ನಡೆಯುವ ಸ್ಥಳಗಳು ಮಾಗಡಿ ರಸ್ತೆ-1,2, ಹೊಸಹಳ್ಳಿ ಪಂಪ್ ಹೌಸ್, ಮೈಸೂರು ರಸ್ತೆ, ದೂರವಾಣಿ ಸಂಖ್ಯೆ : 9845444069, ವಿ.ವಿ.ಪುರಂ, ಸುಧಾಮನಗರ-2, ಕೆಂಪೇಗೌಡ ನಗರ, ಜಗಜೀವನ್‌ರಾಮ್ ನಗರ,ಚಾಮರಾಜಪೇಟೆ ದೂರವಾಣಿ ಸಂಖ್ಯೆ : 22425193, ಸಿ.ಎಲ್.ಆರ್, ಜಾನ್ಸನ್ ಮಾರ್ಕೆಟ್. ದೂರವಾಣಿ ಸಂಖ್ಯೆ : 9845444052, ಜೆ.ಪಿ.ನಗರ-2, ಕೊತ್ತನೂರು ದಿಣ್ಣೆ, ಜಂಬೂಸವಾರಿ ದಿಣ್ಣೆ, ವಿಜಯಬ್ಯಾಂಕ್ ಕಾಲೋನಿ, ಅರಕೆರೆ & ಮೈಕೋ ಲೇಔಟ್, ದೂರವಾಣಿ ಸಂಖ್ಯೆ : 9740984164, ಹೆಚ್.ಆರ್.ಬಿ.ಆರ್.ಲೇಔಟ್ & ಹೆಚ್.ಬಿ.ಆರ್ ಲೇಔಟ್,ಕಾಚರಕನಹಳ್ಳಿ, ಕಲ್ಯಾಣನಗರ ದೂರವಾಣಿ ಸಂಖ್ಯೆ : 9845444150, ಎ.ಇ.ಸಿ.ಎಸ್- 1 & 2, ಹೂಡಿ ದೂರವಾಣಿ ಸಂಖ್ಯೆ : 9740984161, ಜಿ.ಕೆ.ವಿ.ಕೆ, ಮಾನ್ಯತಾ ಟೆಕ್ ಪಾರ್ಕ್ ದೂರವಾಣಿ ಸಂಖ್ಯೆ : 9632029191, ಎಲ್.ಎಲ್.ಆರ್, ಚಿಕ್ಕಲಾಲ್‌ಬಾಗ್, ಬನ್ನಪ್ಪ ಪಾರ್ಕ್, ಸುಧಾಮನಗರ-1. ದೂರವಾಣಿ ಸಂಖ್ಯೆ : 9845444081, ಕೇತಮಾರನಹಳ್ಳಿ, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರ- 1, 2, ನಂದಿನಿಲೇಔಟ್-1 ದೂರವಾಣಿ ಸಂಖ್ಯೆ : 22945176, ಎಂ.ಇ.ಐ. ಲೇಔಟ್ -1 & 2, ಬಾಹುಬಲಿನಗರ. ದೂರವಾಣಿ ಸಂಖ್ಯೆ : 9686448013 ನ್ನು ಸಂಪರ್ಕಿಸಬಹುದಾಗಿದೆ.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ: 8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ –2022

ಬೆಂಗಳೂರು, ಆಗಸ್ಟ್ 31 (ಕರ್ನಾಟಕ ವಾರ್ತೆ):

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯನ್ನು ನಡೆಸಲು, ದೋಷಮುಕ್ತ ಮತ್ತು ಸ್ವಚ್ಛ ಮತದಾರರ ಪಟ್ಟಿ ಅತ್ಯಾವಶ್ಯಕ. ಭಾರತ ಚುನಾವಣಾ ಆಯೋಗವು, ಎಲ್ಲರನ್ನೊಳಗೊಂಡ ಮತ್ತು ದೋಷಮುಕ್ತ ಮತದಾರರ ಪಟ್ಟಿಯನ್ನು ಸಿದ್ದ ಪಡಿಸುವಿಕೆಗೆ ಹೆಚ್ಚು ಮಹತ್ವವನ್ನು ನೀಡಿದೆ, ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2022ರ ವೇಳಾಪಟ್ಟಿಯನ್ನು ಘೋಷಿಸಿದೆ.

ಈಗಾಗಲೇ ಆಗಷ್ಟ 9 ರಿಂದ ಆರಂಭವಾಗಿರುವ ಈ ಪ್ರಕ್ರಿಯೆ ಡಿಸೆಂಬರ್ 27 ರ ವರೆಗೆ ನಡೆಯಲಿದ್ದು, 13 ಜನವರಿ 2022 ರಂದು ಮತದಾರರ ಪಟ್ಟಿಯ ಅಂತಿಮ ಪ್ರಕಟಿಸಲಾಗುವುದು. ಪ್ರತಿಯೊಬ್ಬ ಅರ್ಹ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರಬೇಕು. ಮೃತರಾಗಿರುವ, ಸ್ಥಳ ಬದಲಾಗಿಸಿರುವ ಅಥವಾ ಹೆಸರು ಪುನಾವರ್ತನೆಗೊಂಡಿರುವ ಅನರ್ಹ ವ್ಯಕ್ತಿಗಳ ಹೆಸರನ್ನು ನಿಯಮಾನುಸಾರ ಮತದಾರರ ಪಟ್ಟಿಯಿಂದ ತೆಗೆದುಹಾಕುವುದು. ಮತದಾರರ ಹೆಸರು, ಜನ್ಮ ದಿನಾಂಕ/ವಯಸ್ಸು, ಭಾವಚಿತ್ರ, ವಿಳಾಸ ಇತ್ಯಾದಿ ಎಲ್ಲಾ ವಿವರಗಳು ನಿಖರವಾಗಿ ಪೂರ್ಣವಾಗಿರುವುದು.

2022ರ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಲು ಬೇಕಾದ ಅರ್ಹತೆಗಳು ದಿನಾಂಕ 01ನೇ ಜನವರಿ 2022ಕ್ಕೆ 18 ವರ್ಷ ವಯಸ್ಸನ್ನು ದಾಟುವ ಭಾರತದ ಪ್ರಜೆಗಳಾಗಿರಬೇಕು. ಜನವರಿ 02, 2004 ಕ್ಕಿಂತ ಮೊದಲು ಜನಿಸಿರಬೇಕು. ವಿಧಾನಸಭಾ ಕ್ಷೇತ್ರದ ಸಾಮಾನ್ಯ ನಿವಾಸಿಯಾಗಿರಬೇಕು.

ಮತದಾರರ ವಿವರಗಳ ಪರಿಶೀಲನೆಯ ಉದ್ದೇಶವು ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಕೆಲವು ನ್ಯೂನತೆಗಳು ಇರುವುದಾಗಿ ಮತ್ತು ಮೃತರಾಗಿರುವ ಹಾಗೂ ವಾಸಸ್ಥಳ ಬದಲಾಯಿಸಿರುವ ಹಲವಾರು ವ್ಯಕ್ತಿಗಳ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದಾಗಿ ಸುಮಾರು ದೂರುಗಳು ಸ್ವೀಕೃತವಾಗಿದ್ದು, ಮತದಾರರ ಪಟ್ಟಿಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ ದೋಷರಹಿತ ಮತದಾರರ ಪಟ್ಟಿಯನ್ನು ಸಿದ್ದಪಡಿಸುವುದು ಮತ್ತು ಈ ಕಾರ್ಯಕ್ರಮದಲ್ಲಿ ಮತದಾರರು ಸಹ ಭಾಗವಹಿಸುವಂತೆ ಮಾಡುವುದು ಅವಶ್ಯಕವಾಗಿದೆ.

**ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2022:**

ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2022ರ ವೇಳಾಪಟ್ಟಿಯ ಪರಿಷ್ಕರಣೆ ಪೂರ್ವ ಚಟುವಟಿಕೆಗಳು 9ನೇ ಆಗಸ್ಟ್ 2021 ಸೋಮವಾರದಿಂದ 31ನೇ ಅಕ್ಟೋಬರ್ 2021 (ಭಾನುವಾರ) ರವರೆಗೆ ಭಾವಚಿತ್ರ ಮತ್ತಿತರ ವಿವರಗಳಲ್ಲಿ ಸಾಮ್ಯತೆ ಇರುವ (ಡಿಎಸ್ಇ) ಮತ್ತು ಮತದಾರ ಗುರುತಿನ ಚೀಟಿಗಳ 9 (ಎಪಿಕ್‌ಗಳ) (ಲಾಜಿಕಲ್ ಎರರ್) ವ್ಯತ್ಯಾಸಗಳನ್ನು ತೆಗೆದುಹಾಕುವುದು. ಬಿ.ಎಲ್.ಓಗಳಿಂದ ಮನೆ–ಮನೆ ಪರಿಶೀಲನೆ, ವಿಭಾಗಗಳ ರಚನೆ, ತರ್ಕಬದ್ಧಗೊಳಿಸುವಿಕೆ / ಮತದಾನ ಕೇಂದ್ರಗಳ ಮರುವ್ಯವಸ್ಥೆ.

**ಪುನರಾವರ್ತನ ಚಟುವಟಿಕೆಗಳು:**

ಸಂಯೋಜಿತ ಕರಡು ಮತದಾರರ ಪಟ್ಟಿಯ ಪ್ರಕಟಣೆ ದಿನಾಂಕ 8ನೇ ನವೆಂಬರ್ 2021 ಸೋಮವಾರ. ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಭರ್ತಿ ಮಾಡುವ ಅವಧಿಯು 8ನೇ ನವಂಬರ್ 20219(ಸೋಮವಾರ) ರಿಂದ 8–12–2021 (ಬುಧವಾರ). ವಿಶೇಷ ಪ್ರಚಾರದ ದಿನಾಂಕಗಳು 07–11–2021, 14–11–2021, 21–11–2021 ಮತ್ತು 28–11–2021. ಹಕ್ಕುಗಳು ಮತ್ತು ಆಕ್ಷೇಪಣೆಗಳ ವಿಲೇವಾರಿ ದಿನಾಂಕ 27ನೇ ಡಿಸಂಬರ್ 2021 ಸೋಮವಾರವಾಗಿರುತ್ತದೆ. ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಯು 13ನೇ ಜನವರಿ 2022 ಗುರುವಾರವಾಗಿರುತ್ತದೆ.

2020 ರ ಅಂತಿಮ ಮತದಾರರ ಪಟ್ಟಿಯಲ್ಲಿ ಪುರುಷರು 26319044 ಪ್ರಸ್ತುತ ಇದ್ದಂತೆ (10–08–2021)ರಂತೆ 26397235. ಮಹಿಳೆಯರು 25856825 ಪ್ರಸ್ತುತ ಇದ್ದಂತೆ(10–08–2021) 25949419. ಇತರರು 4763 ಪ್ರಸ್ತುತ (10–08–2021) 4722. ಒಟ್ಟು 2020 ರ ಅಂತಿಮ ಮತದಾರರ ಪಟ್ಟಿ 52180632 ಪ್ರಸ್ತುತ ಇದ್ದಂತೆ (10–08–2021) 52351377.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ**

ಬೆಂಗಳೂರು, ಆಗಸ್ಟ್ 31 (ಕರ್ನಾಟಕ ವಾರ್ತೆ):

**ದಿನಾಂಕ: 31.8.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶು ವೈದ್ಯಕೀಯ ಕಾಲೇಜು, ಹೆಬ್ಬಾಳ | 39 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 51 | ತೃಪ್ತಿಕರ | CO |
| 3 | ಕವಿಕ, ಮೈಸೂರುರಸ್ತೆ | 31 | ಉತ್ತಮ | $PM_{10}$ |
| 4 | ರಾಜೀವ್‌ಗಾಂಧಿ ಎದೆ ರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 24 | ಉತ್ತಮ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 67 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 54 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 48 | ಉತ್ತಮ | $PM_{10}$ |
| **(31.8.2021 at 11.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 47 | ಉತ್ತಮ | $PM_{10}$ |
| 9 | ಪೀಣ್ಯ | 62 | ತೃಪ್ತಿಕರ | $PM_{10}$ |
| 10 | ಬಿಟಿಎಂ ಲೇಔಟ್ | 75 | ತೃಪ್ತಿಕರ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಶ್ವಾಸಕೋಶದ ಅಸ್ವಸ್ಥತೆ |

**AQI of the CAAQM stations established in Bengaluru City**

**Date : 31.8.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 39 | Good | $PM_{10}$ |
| 2 | Jayanagar 5th Block, Shalini ground | 51 | Satisfactory | CO |
| 3 | KAVIKA, Mysore Road | 31 | Good | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 24 | Good | $PM_{10}$ |
| 5 | HSR Layout, near Central Silkboard | 67 | Satisfactory | $PM_{10}$ |
| 6 | City Railway Station, Magestic, Bengaluru | 54 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 48 | Good | $PM_{10}$ |
| **(31.8.2021 at 11.05 AM)** | | | | |
| 8 | BWSSB, Kadabesanahalli | 47 | Good | $PM_{10}$ |
| 9 | Peenya | 62 | Satisfactory | $PM_{10}$ |
| 10 | BTM Layout | 75 | Satisfactory | CO |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |